ಎಂದು ಕರಗಿ ಹರಿಯುವ ಬೆಣ್ಣೆಮುದ್ದೆ, ಮೆಣಸಿನಕಾಯಿ ಚಟ್ನಿ, ಚಟ್ನಿಪುಡಿ ಮೊಸರು ಬಿದ್ದರೆ ಯಾವ ಗಣಮಗ ಕಂಪ್ಲೇಟು ಹೇಳಲು ಬಾಯಿತೆರೆಯಬೇಕು ಹೇಳಿ?

"ನೀನು ಮಾತಾಡಲ್ಲ ಅನ್ನದು ಯಾವ್ ದ್ವಡ್ಡ ಮಾತು ಹೇಳಪ. ಆಕಿ ಏನು ಸುಮಾರ್ (ಕೆಟ್ಟ) ಅಡಿಗಿ ಮಾಡಿ ಹಾಕತತಾ? ಹದವಾಗೇ ಉಣತಿ ಮೂರು ಹ್ವತ್ತೂ?" ಅಂತ ಅತ್ತೆ ಉತ್ತರ ಕೊಟ್ಟಿದ್ದರು. ಇನ್ನೇನು ಚಿಕ್ಕಪ್ಪನಿಗೆ ಬೈಯ್ಯಬೇಕು ಅಂತ ತಯಾರಾಗಿದ್ದ ಚಿಕ್ಕಮ್ಮನ ಕಣ್ಣಲ್ಲಿ ತೆಳುವಾಗಿ ನೀರುಬಂತು. ಒಬ್ಬರಾದರೂ ಕನಿಷ್ಠ ಆ ಮಾತನ್ನ ತಪ್ಪು ಅಂತ ಹೇಳಿದ್ದಲ್ಲದೆ ತನ್ನ ಪರ ನಿಂತರಲ್ಲ ಅಂತ ಇದ್ದಿರಬೇಕು.

ಇನ್ನೊಂದು 'ಸಂಪ್ರದಾಯ'ದ ಬಗ್ಗೆ ಹೇಳಬೇಕು. ಹೆಣ್ಣುಮಕ್ಕಳು ಉಸಿರುಕಟ್ಟಿ ಅಡುಗೆ ಮಾಡಿ ಬಡಿಸಲು ನಿಲ್ಲಬೇಕು. ಸಾಮಾನ್ಯವಾಗಿ ಮನೆಯ ಹಿರಿಯ ಗಂಡಸರು ಕನಿಷ್ಠ ಚೆನ್ನಾಗಿದೆ ಚೆನ್ನಾಗಿಲ್ಲ ಅಂತಲೂ ಹೇಳದೆ ಸುಮ್ಮನೆ ಸೊರೆದುಹೋಗುವುದು... ಎಷ್ಟು ಸಾರಿ ಹಾಕಿಸಿಕೊಂಡರು, ತಾವೇ ಕೇಳಿ ಹಾಕಿಸಿಕೊಂಡರೋ ಅಥವಾ ಇನ್ನೊಮ್ಮೆ ಬಡಿಸಲು ಬಂದಾಗ ವಿರೋಧ ಮಾಡದೆ ತಲೆ ಆಡಿಸಿ ಹಾಕಿಸಿಕೊಂಡರೋ, ಹೇಗೆ ಉಂಡರು, ಅನ್ನ ದಿನಾ ಹಾಕಿಸಿಕೊಳ್ಳುವಷ್ಟು ಹಾಕಿಸಿಕೊಂಡರೋ ಇಲ್ಲಾ ಕಡಿಮೆ ಹಾಕಿಸಿಕೊಂಡರೋ, ಆರೋಗ್ಯ ಚೆನ್ನಾಗಿಲ್ವಾ ಇತ್ಯಾದಿ ವಿಷಯಗಳನ್ನು ಕೂಲಂಕಷವಾಗಿ ಗುಪ್ತಚರ ವಿಭಾಗದವರ ಹಾಗೆ ಗಮನಿಸುತ್ತ ಅಡುಗೆ ಹೇಗಿತ್ತು ಮತ್ತು ತಿನ್ನುವವರ ಆರೋಗ್ಯ ಹೇಗಿರಬಹುದು ಎನ್ನುವುದನ್ನ ಹೆಂಗಸರೇ ಅಂದಾಜಿಸಬೇಕಿತ್ತು. ಇದೆಂಥಾ ಜಿಡ್ಡು ಕಟ್ಟು ಹೇಳಿ ಮತ್ತೆ? ಅಡುಗೆ ರುಚಿಯಾಗಿದೆ ಅಂತ ಬಾಯಿ ಬಿಟ್ಟು ಹೇಳಲೂ ದಾಕ್ಷಿಣ್ಯವೇ? ಹೆಣ್ಣುಮಕ್ಕಳು ಕಾಲದುದ್ದಕ್ಕೂ ಯಾಕಿಷ್ಟು ಎಲ್ಲದಕ್ಕೂ ಹೊರತಾಗಿ ಮೆಚ್ಚುಗೆಗೆ, ಮಾತುಗಳಿಗೆ ಹಪಹಪಿಸುತ್ತಾ ನಿಲ್ಲಬೇಕು?

ಗಂಡಸರು ಹೆಂಗಸರೂ ಅಡುಗೆ ಮಾಡಬಲ್ಲ ಇಂದಿನ ಸಂದರ್ಭದಲ್ಲಿ ಅಡುಗೆಮನೆಯಂಥಾ ಪಗಡೆ ಆಟದ ಸ್ಥಳ ಇನ್ನೊಂದಿಲ್ಲ ಎನ್ನುವುದು ಅಂತಿಮ ಸತ್ಯ, ಯಾಕೆಂದರೆ ಗಂಡಸರಿಗೆ ಅಡುಗೆ ಮಾಡುವಾಗ ಸಿಗುವಷ್ಟು ಮಾರ್ಜಿನ್ ಹೆಂಗಸರಿಗೆ ಸಿಗುವುದೇ ಇಲ್ಲ. ವಯಸ್ಸು ಮೀರಿದರೂ ಟೀ ಮಾಡಿಕೊಳ್ಳಲು ಹಿಂದೆ ಮುಂದೆ ನೋಡುವ ಗಂಡಸರು ಹೇಗೆ ಅಡುಗೆ ಮಾಡಿದರೂ ಅದೊಂದು ಮಹಾನ್ ಕ್ರಾಂತಿ. ಐ.ಎ.ಎಸ್ ಆಫೀಸರ್ ಆಗಿದ್ದರೂ ಹೆಂಗಸಿಗೆ ಅಡುಗೆ ಮಾಡಲು ಬರದಿದ್ದರೆ "ಬರೀ ಆಪೀಸಿಗ್ ಹೋಗಿ ಬಂದರೆ ಹ್ವಟ್ಟಿಗೇನು ರೊಟ್ಟು (ರಟ್ಟು) ತಿನಬಕ ಅಕಿ ಗಂಡ?" ಅಂತ ನನ್ನ ಅಜ್ಜಿ ಒಮ್ಮೆ ಕೇಳಿದ್ದರು. "ಅವ್ರಿಗೆ ಅಡಿಗಿ ಮಾಡಕೆ ಜನ ಇರತರೆ ಕಣಜಿ..." ಅಂತ ಹೇಳಿದರೂ "ಥು! ಆಳು ಮಾಡಿದ್ದು ಹಾಳು ಅಂತ ಕೇಳಿಲ್ಲ? ಅಕಿನೆ ಮಾಡಬಕು ಅಂದರೆ ಚಲೊ ಕಣವ" ಅಂತ ಗಟ್ಟಿಯಾಗಿ ಹೇಳಿದ್ದರು.

ಅಡುಗೆಮನೆಯಲ್ಲೇ ಬಹುಶಃ ಹೆಣ್ಣುಮಕ್ಕಳಿಗೆ ಮಲ್ಟಿ ಟಾಸ್ಕಿಂಗ್ (ಹಲವು ಕೆಲಸಗಳನ್ನ ಒಟ್ಟಿಗೇ ಮಾಡುವ ಚಾಕಚಕ್ಯತೆ) ತರಬೇತಿ ಸಿಗುವುದು. ಅಲ್ಲಿ ಬೇಳೆ ಬೇಯುವಷ್ಟರಲ್ಲಿ ಮಸಾಲೆ ಹುರಿದು ರುಬ್ಬಿ, ಅನ್ನಕ್ಕೆ ರೆಡಿ ಮಾಡಿ, ರೊಟ್ಟಿ/ಮುದ್ದೆ/ಚಪಾತಿಗೆ ರೆಡಿ ಮಾಡುತ್ತಾ, ಮಧ್ಯದಲ್ಲಿ ಒಂದಷ್ಟು ಕಾಫಿ/ಟೀ ಕಾಯಿಸಿ, ಕಾಳಿನ ಡಬ್ಬಿಗಳ ಸ್ಟಾಕ್ ಚೆಕ್ ಮಾಡಿ, ಹುಳ ಬಂದಿದೆಯೇ ಪರೀಕ್ಷಿಸಿ, ಇತ್ತ ಟೀ ಸೋಸುತ್ತಾ ಮತ್ತೆ ಅದೇ ಒಲೆ ಮುಂದುವರೆಸಿ ಉರಿಯ ಕಾವನ್ನು ಕಾಪಾಡಿ ಊಟಕ್ಕೆ ಮುಂದೆ ಇಷ್ಟೇ ತುಪ್ಪ ಕರಗಿಸಿಕೊಂಡು ಎಲ್ಲಾ ಮುಗಿಸಿ ಸ್ಟೋವ್ ತೊಳೆಯುವ ಮುನ್ನ ಬದನೇಕಾಯಿ ಮೆಣಸಿನಕಾಯಿ ಸುಟ್ಟುಕೊಂಡು ಚಟ್ನಿಯ ನೆನಪಲ್ಲಿ ಹಸಿವೆ ಹೆಚ್ಚಿಸಿಕೊಳ್ಳುತ್ತಾ ಅಬ್ಬಾ! ಒಂದೇ ಎರಡೇ!

ಗಂಡು ಹೆಣ್ಣಿನ ಅಡುಗೆ ಸಮೀಕರಣ ಬಿಡಿ. ಅಡುಗೆಮನೆ ಅನ್ನುವುದು ಅತ್ತೆ ಸೊಸೆಯ ನಡುವೆ ಕೂಡ ಒಂದು ಸೂಕ್ಷ್ಮ ಸಂಕೀರ್ಣ ವಿಷಯವೇ. ಎಷ್ಟೋ ಮನೆಗಳಲ್ಲಿ ಅಮ್ಮ ಮಗಳ ನಡುವೆ ಕೂಡ ಇದು ಒಂದು ವಿಚಿತ್ರ ತಡೆಗೋಡೆಗಳನ್ನು ಎಬ್ಬಿಸುತ್ತದೆ. ಅಡುಗೆಮನೆಯಲ್ಲಿ ಹರಿಯುವಷ್ಟು ಕುಹಕ,